**ಓ.ಎಸ್.ನಂಃ 12/2025**

**ಪಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 24.02.2026 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ**

ದಿಃ 25.07.2023 ರಂದು ಪ್ರತಿವಾದಿಗಳು ಸಂಬಂಧಪಟ್ಟ ಇಲಾಖೆಗೆ ಅರ್ಜಿ ಸಲ್ಲಿಸಿ ತಮ್ಮ ಸ್ವತ್ತನ್ನು ಹದ್ದುಬಸ್ತು ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದನ್ನು ನೋಡಿ ನೀವು ಹೇಳಬಹುದಾ ಎಂದರೆ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಃ 51/1 ರ ವಿಸ್ತೀರ್ಣ 4 ಎಕರೆಗೆ ಪ್ರತಿವಾದಿಗಳು ಮಾಲೀಕರು ಎಂದರೆ ಸರಿ. ಪ್ರತಿವಾದಿ ಜಮೀನಿನ ಪೂರ್ವಕ್ಕೆ-ಸರ್ಕಾರಿ ರಸ್ತೆ ಎಂದರೆ ಸರಿ. ದಕ್ಷಿಣಕ್ಕೆ- ಸರ್ವೇ ನಂಃ 56 ರ ಜಮೀನು ಇದೆ, ಉತ್ತರಕ್ಕೆ- ಸರ್ವೇ ನಂಃ 24 ರ ಜಮೀನು ಇದೆ ಎಂದರೆ ಸರಿ. ಪಶ್ಚಿಮಕ್ಕೆ- ಸರ್ವೇ ನಂಃ 36 ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಶ್ಚಿಮಕ್ಕೆ-ಸರ್ವೇ ನಂಃ 40 ಇಲ್ಲ ಎಂದು ನುಡಿಯುತ್ತಾರೆ. ಸದರಿ ಚೆಕ್ಕುಬಂಧಿಯಲ್ಲಿ ಸರ್ವೇ ನಂಃ 51/1 ರ ಜಮೀನು ಇದೆ ಎಂದರೆ ಸರಿ.

ನಿಪಿ4 ರಲ್ಲಿ ಕಾಲುದಾರಿ ಅಥವಾ ಬಂಡಿದಾರಿ ಇರುವುದಿಲ್ಲ. ಸಾಕ್ಷಿ ಮುಂದುವೆರದು ನಾವು ಪೂರ್ವದಿಂದಲೂ ಅಲ್ಲಿ ತಿರುಗಾಡುತ್ತೇವೆ ಎಂದು ನುಡಿಯುತ್ತಾರೆ. ನಿಪಿ4 ಬೊಮ್ಮನಳ್ಳಿ ಕಡೆಯಿಂದ ರಸ್ತೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೆಂಗೋಡಿ ಕಡೆಯಿಂದ ರಸ್ತೆ ಇದೆ ಎಂದು ನುಡಿಯುತ್ತಾರೆ. ನನ್ನ ಜಮೀನಿನ ಪಶ್ಚಿಮಕ್ಕೆ-ಬೊಮ್ಮನಹಳ್ಳಿ ಎಲ್ಲೆ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ4 ಸೃಷ್ಟಿತ ದಾಖಲೆ ಅಲ್ಲ, ಅದು ಸರಿಯಿದೆ. ನಿಪಿ4 ರಲ್ಲಿ ಬೊಮ್ಮನಹಳ್ಳಿಯಿಂದ ಕೆಂಗವಾಡಿ ಗ್ರಾಮಕ್ಕೆ ಮೂರು ರಸ್ತೆಗಳನ್ನು ತೋರಿಸಲಾಗಿದೆ ಎಂದರೆ ಸರಿಯಲ್ಲ. ಪೂರ್ವದಿಂದ ನಾವು ತಿರುಗಾಡುತ್ತಿರು ರಸ್ತೆಯನ್ನು ಮುಚ್ಚಿದ ದಾರಿ ಎಂದು ಠಾಣೆಗೆ ದೂರು ನೀಡಿದ್ದೆ, ಆದರೆ ಪೊಲೀಸರು ನ್ಯಾಯಾಲಯಕ್ಕೆ ಹೋಗಿ ಎಂದು ಸೂಚಿಸಿದರು. ಪೊಲೀಸರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿಲ್ಲ.

ಪ್ರತಿವಾದಿ ಸದರಿ ರಸ್ತೆಯನ್ನು ಮುಚ್ಚಿದ್ದಾರೆ ಎಂದು ಸಂಬಂಧಪಟ್ಟ ಇಲಾಖೆಗೆ ದೂರು ದಾಖಲಿಸಿದ್ದಾರೆ ಎಂದರೆ ಸಾಕ್ಷಿ ಇಂದಿಗೂ ನಾವು ಅಲ್ಲೆ ತಿರುಗಾಡುತ್ತಿದ್ದೇವೆ. ಸಾಕ್ಷಿ ಮುಂದುವರೆದು ಪ್ರತಿವಾದಿ ಸದರಿ ದಾರಿಯನ್ನು ಮುಚ್ಚಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ತಮ್ಮ ಜಮೀನಿಗೆ ಬೇಲಿ ಹಾಕಿದ್ದಾರೆ ಎಂದರೆ ಸರಿಯಲ್ಲ.

**ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ